# ಕನ್ನಡದ ಚಿತ್ತ ದ್ರಾವಿಡರತ್ತ

**ತಮಿಳರು ಸಂಸ್ಕೃತದ ಪ್ರಭಾವಕ್ಕೆ ಅತಿಯಾಗಿ ಒಳಗಾಗದೆ ತಮ್ಮ ತನ್ನವನ್ನು, ದ್ರಾವಿಡರ ಮೂಲವನ್ನು ಕಾಪಾಡಿಕೊಂಡಿದ್ದಾರೆ. ಆದರೆ ಕನ್ನಡಿಗರಾದ ನಾವು?**



ಡಿ.ಎನ್. ಶಂಕರ ಬಟ್

○ ಡಾ. ಕೆ.ಬಿ. ಬ್ಯಾಳಿ, ಕುಕನೂರ

ದ್ರಾವಿಡರು ಎಲ್ಲಿಂದ ಬಂದರು, ಇಲ್ಲೇ ಇದ್ದರೋ ಎನ್ನುವ ವಿಷಯ ಇನ್ನೂ ತಲೆ ತಿನ್ನಹತ್ತಿದೆ, ಹಾಗೆಯೇ ಭಾಷೆ ಹೇಗೆ ಹುಟ್ಟಿತು, ನಿಖರವಾಗಿ ಗೊತ್ತಿಲ್ಲ. ಸಿಂಧೂ ಸಂಸ್ಕೃತಿಯ, ಲಿಪಿಯ, ರಹಸ್ಯ ತಿಳಿದಿಲ್ಲ ಈಜಿಪ್ಟ್ ಮೆಸೋಪೋಟಮಿಯ ಸಂಸ್ಕೃತಿಯ ಲಿಪಿ ಓದಲಾಗಿದೆ. ಆದರೆ ಸಿಂಧು ಲಿಪಿ ಓದಲು ಪ್ರಯತ್ನ ನಡೆದಿದೆ, ಮಹಾರಾಷ್ಟ್ರದ ಕಂಗಾಲಿ ಎನ್ನುವವರು ಗೋಂಡಿ ಭಾಷೆಯಿಂದ ಓದಿದ್ದಾರೆ. ಹಿಂದಿಯ ಕೃತಿಯನ್ನು ಕನ್ನಡಕ್ಕೆ ನಾನು ಅನುವಾದಿಸಿರುವೆ. ಇಂಥ ಅನೇಕ ರಹಸ್ಯಗಳು ಸೃಷ್ಟಿಯಲ್ಲಿವೆ. ದ್ರಾವಿಡ ಭಾಷೆಗಳು ಭಾರತದಲ್ಲಷ್ಟೇ ಅಲ್ಲ ಪಾಕಿಸ್ತಾನದಲ್ಲಿ 'ಬ್ರಾಹೂಈ' ನೇಪಾಲದಲ್ಲಿ 'ಧಾಂಗರ್' ಕುಡಖ್ ಹಾಗೂ ಬಾಂಗ್ಲಾ ದೇಶಗಳಲ್ಲಿ ಬಳಕೆಯಲ್ಲಿವೆ. ಪ್ರಪಂಚದಲ್ಲಿ ೫೦೦೦ ಭಾಷೆಗಳಿದ್ದು, ಕೆಲವರ ಅಭಿಪ್ರಾಯದಂತೆ ೧೦ ಸಾವಿರ, ೩೦೦೦ ಎಂದೂ ಹೇಳುತ್ತಾರೆ. ಭಾರತದಲ್ಲಿ ೨೦೦ ಭಾಷೆಗಳಿವೆ. ದ್ರಾವಿಡ ಕುಟುಂಬಕ್ಕೆ ಸೇರಿದ ಭಾಷೆಗಳು ೨೬, ಆಸ್ಟ್ರೋ ಏಶಿಯಾಟಿಕ್ ಕುಟುಂಬಕ್ಕೆ ಸೇರಿದ ೨೦ ಭಾಷೆಗಳು ಭಾರತದಲ್ಲಿವೆ. ಈ ವರೆಗೆ ಸುಮಾರು ೩೦–೩೫ ದ್ರಾವಿಡ ಭಾಷೆಗಳು ಬೆಳಕಿಗೆ ಬಂದಿವೆ ಎಂಬುದು ಕೆಲವರ ಅಭಿಪ್ರಾಯ. ಕಳೆದ ೫ ದಶಕಗಳಲ್ಲಿ ಭಾರತದಲ್ಲಿ ಅನೇಕ ಭಾಷೆಗಳು ಕಣ್ಮರೆಯಾಗಿವೆ. ೧೯೭೧ರಲ್ಲಿ ಕೇಂದ್ರ ಸರಕಾರದ ಸಮೀಕ್ಷೆಯ ಪ್ರಕಾರ ೧೦ ಸಾವಿರ ಜನರು ಒಂದು ಭಾಷೆಯನ್ನು ಮಾತಾಡುತ್ತಿದ್ದರೆ, ಅದನ್ನು ಸಜೀವ ಭಾಷೆ ಎಂದು ಪರಿಗಣಿಸಬೇಕು ಇಲ್ಲವಾದರೆ, ಅದನ್ನು ಕೈಬಿಡಬೇಕು ಎಂದು ನಿಯಮ ಮಾಡಿತು. ಇದರಿಂದ ನೂರಾರು ಭಾಷೆಗಳು ಮಾಯವಾದವು. ಇದನ್ನೇ ಆಧಾರವಾಗಿಟ್ಟುಕೊಂಡು ನಮ್ಮ ಕನ್ನಡ ಸಾಯಲು ಸಾಧ್ಯವಿಲ್ಲವೆಂದು ಸಾಹಿತಿಗಳು, ಚಿಂತಕರು, ಕನ್ನಡಾಭಿಮಾನಿಗಳು ಹೇಳಿಕೆ ಕೊಡುತ್ತಾ ನಿಶ್ಚಿಂತೆಯಿಂದ ಇದ್ದಾರೆ. ದ್ರಾವಿಡ ಭಾಷೆಗಳಲ್ಲಿ ಕನ್ನಡ ಪ್ರಮುಖವಾದ ಭಾಷೆ, ತಮಿಳಿನ ಸರಿಸಮವಿರುವ ಶ್ರೀಮಂತ ಭಾಷೆಯಾಗಿದೆ. ಆದರೆ ಅದನ್ನು ತಮಿಳರಂತೆ

ಉಳಿಸಿ ಬೆಳಸಲು ಸಾಧ್ಯವಾಗಲೊಲ್ಲದು. ಇದಕ್ಕೆ ಕಾರಣ ಮೈಸೂರು, ಬೆಂಗಳೂರು, ಮುಂಬಯಿ ಕರ್ನಾಟಕ, ಹೈದ್ರಾಬಾದ್-ಕರ್ನಾಟಕ, ಮದ್ರಾಸ ಪ್ರಾಂತ ಮುಂತಾದ ಭಾಗಗಳಲ್ಲಿ ಮಾತಾಡುವ ಭಾಷಾ ಪ್ರಭೇದ, ವೈವಿಧ್ಯತೆ ಇರಬಹುದು. ಇಂಥ ಪರಿಸ್ಥಿತಿಯಲ್ಲಿ ಕೆಲವು ವಿದ್ವಾಂಸರ ದೃಷ್ಟಿ ಮೂಲ ದ್ರಾವಿಡ/ಕನ್ನಡದತ್ತ ಹೊರಳ ಹತ್ತಿದೆ. ಕನ್ನಡಕ್ಕೆ ಕನ್ನಡದ್ದೇ ವ್ಯಾಕರಣ ಬೇಕು, ಏಕೆಂದರೆ, ಈಗಿನ ವ್ಯಾಕರಣ ಸಂಸ್ಕೃತಮಯವಾಗಿದೆ ಎಂದು ದ್ರಾವಿಡ ಕನ್ನಡದ ಸ್ವರೂಪ, ವ್ಯಾಕರಣ ಕುರಿತು ಚಿಂತನೆ ಪ್ರಾರಂಭಿಸಿದ್ದಾರೆ. ಈಗಾಗಲೇ ಕೆಲ ವಿದೇಶಿ ವಿದ್ವಾಂಸರು ಕನ್ನಡ ವ್ಯಾಕರಣ ಕುರಿತು ಕೆಲಸ ಮಾಡಿದ್ದಾರೆ. ಅಂತಹವರಲ್ಲಿ ಕಿಟೆಲ್, ಜಾನ್ಮೆಕರೆಲ್ ಹೆರಾಲ್ಡ್ ಸ್ಪೆನ್ಸರರನ್ನು ಹೆಸರಿಸಬಹುದು. ಇವರು ಕನ್ನಡ ವ್ಯಾಕರಣ ರಚಿಸಿದ್ದಲ್ಲದೆ, ಆ ಕುರಿತು ದೀರ್ಘವಾಗಿ ಚಿಂತನೆ ಮಾಡಿದ್ದಾರೆ ಸ್ಪೆನ್ಸರ್ ಕನ್ನಡ ಸಮಾಸಗಳ ಬಗ್ಗೆ ದೀರ್ಘವಾಗಿ ಬರೆದಿದ್ದಾರೆ.

ಕನ್ನಡ ಕ್ರೀಯಾಸಮಾಸ, ಗಮಕಮಾಸ, ವಿಪ್ಪಸಮಾಸ ಸಂಸ್ಕೃತದಲ್ಲಿ ಇಲ್ಲವೆಂದು ಪ್ರತಿಪಾದಿಸಿದ್ದಾರೆ. ಈಗ ಪ್ರಮುಖವಾಗಿ ವಿದ್ವಾನ್ ಡಾ. ಡಿ.ಎನ್. ಶಂಕರಭಟ್ಟರು ಕನ್ನಡಕ್ಕೊಂದು ಕನ್ನಡ ವ್ಯಾಕರಣ ಬೇಕು ಎಂದು-ಕನ್ನಡ 'ಸೊಲ್ಲರಿಮೆ-ಳ' ಬರೆದಿದ್ದಾರೆ. ಅನೇಕರ ಕೂಗಿಗೆ ಉತ್ತರವಾಗಿದ್ದಾರೆ. ಕನ್ನಡ ಭಾಷೆ ಕುರಿತಾಗಿ ಅನೇಕ ಪುಸ್ತಕ ಬರೆಯುವುದರೊಂದಿಗೆ ಕನ್ನಡ ಸೊಲ್ಲರಿಮೆ ಹೆಸರಿನಲ್ಲಿ ೪ನೇ ವ್ಯಾಕರಣ ಹೊರ ತಂದಿದ್ದಾರೆ. ಈ ೪ನೇ ಕನ್ನಡ ವ್ಯಾಕರಣ ಸಂಸ್ಕೃತ ಭೂಯಿಷ್ಟವಾದ ಕನ್ನಡ ವ್ಯಾಕರಣದಿಂದ ದೂರ ಸರಿದು ಪಕ್ಕಾ ಕನ್ನಡ ಸೊಲ್ಲರಿಮೆ ರಚಿಸಿದ್ದಾರೆ.

ಅವನ್ನು ವೀಕ್ಷಿಸಿದಾಗ ನಮಗೆ ತಟ್ಟನೆ ಹೊಳೆಯುವುದೇನೆಂದರೆ, ಕೆಲ ಶಬ್ದಗಳು ಬಳಕೆಯವು, ಆದರೆ ಹೆಚ್ಚಿನ ಶಬ್ದಗಳು ಹೊಸವು ಎನಿಸುತ್ತವೆ. ಬರವಣಿಗೆಯಲ್ಲೂ ಪೂರ್ಣ ಬದಲಾವಣೆ ಕಂಡುಬರುತ್ತದೆ. ಇವನ್ನು ವೀಕ್ಷಿಸಿದಾಗ ಬಹುಶಃ ಕನ್ನಡ ಪದಗಳೇ ನಮಗೆ ಹೊಸ ಪದಗಳಾಗಿ ನಮ್ಮ ಮುಂದೆ ಬರುತ್ತವೆ. ಇದಕ್ಕೆ ಕಾರಣ ನಾವು ಸಂಸ್ಕೃತ ಪದಗಳಿಂದ ತುಂಬಿದ ವ್ಯಾಕರಣಕ್ಕೆ ಒಗ್ಗಿ, ಬಗ್ಗಿ ಹೋಗಿದ್ದೇವೆ. ಇಂಗ್ಲಿಷಿನಲ್ಲಿ ನಾವು ಬಂಧಿತರಾದಂತೆ ಸಂಸ್ಕೃತದಲ್ಲೂ ಬಂಧಿತರಾಗಿದ್ದೇವೆ.

ಈ ದೃಷ್ಟಿಯಿಂದ ತಮಿಳರು, ಬಹುಬುದ್ಧಿವಂತರು ಅವರು ಸಂಸ್ಕೃತದ ಪ್ರಭಾವಕ್ಕೆ ಅತಿಯಾಗಿ ಒಳಗಾಗದೆ ತಮ್ಮತನವನ್ನು ದ್ರಾವಿಡರ ಮೂಲವನ್ನು ಕಾಪಾಡಿಕೊಂಡಿದ್ದಾರೆ. ಆದರೆ ಕನ್ನಡಿಗರು, ತೆಲುಗರು, ಮಲೆಯಾಳಿಗಳಿಗೆ ಇದು ಸಾಧ್ಯವಾಗಲಿಲ್ಲ. ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ಕ್ಷೇತ್ರಗಳು ಸಂಸ್ಕೃತಮಯವಾಗಿವೆ. ದ್ರಾವಿಡ ಪದಗಳೂ ಸಂಸ್ಕೃತದಲ್ಲಿ ಸೇರಿವೆ. ಸುಮಾರು ೪೨೦ ಸಂಸ್ಕೃತದಲ್ಲಿನ ಶಬ್ದಗಳು ದ್ರಾವಿಡಿಯನ್ ಮೂಲದವು ಎನ್ನುತ್ತಾರೆ ಕಿಟೆಲ್ ಅವರು. ಅಲ್ಲಿಂದ ನಾವು ತಪ್ಪಿಸಿಕೊಳ್ಳದ ಸ್ಥಿತಿಯಲ್ಲಿರುವಾಗ ಡಾ. ಡಿ.ಎನ್. ಅವರ ಈ ಪ್ರಯತ್ನ, ಪ್ರಯೋಗ, ಎಷ್ಟರ ಮಟ್ಟಿಗೆ ಪರಿವರ್ತನೆ ತರುವುದೋ ಕಾಯ್ದು ನೋಡಬೇಕು. ಇನ್ನೋರ್ವ ಶ್ರೀರಾಜ್ ಎಚ್.ಎಸ್., ವಿಶ್ರಾಂತ ತಂತ್ರಾಂಶ ತಜ್ಞ! 'ಕನ್ನಡಿಗರೂ ದ್ರಾವಿಡರೆ' ಎನ್ನುವ ಕೃತಿಯಲ್ಲಿ ಶುದ್ಧ ಕನ್ನಡ ಕುರಿತು ವಿವರಿಸಿದ್ದಾರೆ. ಆ ಶುದ್ಧ ಕನ್ನಡ ಶಬ್ದಗಳನ್ನು ನೋಡಿದಾಗ ಮತ್ತೊಂದು ಹೊಸ ಭಾಷೆಯ ಆಭಾಸವಾಗುತ್ತದೆ. ಈವರೆಗೆ ಕನ್ನಡಕ್ಕೆ ತನ್ನದೆ ಆದ ವ್ಯಾಕರಣವಿಲ್ಲದ್ದರಿಂದ ಕನ್ನಡ

ಸಂಸ್ಕೃತದಲ್ಲಿ ಸಿಕ್ಕು ಹೋಗಿದೆ. ಈಗಂತೂ ಇಂಗ್ಲಿಷ್ ಹೊಡೆತಕ್ಕೆ ಸಿಕ್ಕು ನಲುಗುತ್ತಿದೆ. ದ್ರಾವಿಡ ಭಾಷೆಯಲ್ಲಿ ಮಹಾಪ್ರಾಣ ಇಲ್ಲ; ಬಿಟ್ಟು ಹೋಗಿವೆ. ಬಳ್ಳಾರಿ ಕೆಲವು ಭಾಗ, ಅಲ್ಪ ಪ್ರಾಣದಲ್ಲೇ ಮಾತಾಡುವ ರೂಢಿ ಅವರು ಮದ್ರಾಸ ಪ್ರಾಂತದಲ್ಲಿದ್ದಾಗ, ತಮಿಳಿನ ಪ್ರಭಾವಿರಬೇಕು. ಬಳಕೆ ಇಲ್ಲದ ದ್ರಾವಿಡ ಪದಗಳು, ನಮ್ಮಿಂದ ದೂರ ಸರಿದ ಕನ್ನಡ ಪದಗಳು ಈ ಹಿಂದಿನ ಅವತಾರದಲ್ಲಿ ನಮ್ಮೆದುರಿಗೆ ಬಂದಾಗ ನಮಗೆ ಚಕಿತವಾಗುವುದು ಸಹಜ. ಹನ್ನೆರಡನೆ ಶತಮಾನದ ವಚನಗಳಲ್ಲಿ ಶರಣರು ಬಳಕೆ ಮಾಡಿದ ಎಷ್ಟೋ ಪದಗಳು, ನಮ್ಮನ್ನು ಚಕಿತಗೊಳಿಸಲಾರವು. ಅವು ನಮ್ಮಿಂದ ಬಳಕೆಯಾಗಿವೆ. ಭಾಷೆ ಎಂದರೆ ಬಳಕೆ, ಅದನ್ನು ಬಳಸಿದರೆ ಉಳಿಯುತ್ತದೆ ಇಲ್ಲವಾದರೆ ಅಳಿಯುತ್ತದೆ, ಈ ಸ್ಥಿತಿ ನಮ್ಮ ದ್ರಾವಿಡ ಕನ್ನಡದ್ದು. ಆರ್ಯರು ತಮ್ಮ ಭಾಷೆ, ಸಂಸ್ಕೃತಿ, ಸಾಹಿತ್ಯ ಹೇಗೆ ಬಿತ್ತಿದ್ದಾರೆ. ನಾವು ಅಲ್ಲಿಂದ ತಪ್ಪಿಸಿಕೊಳ್ಳುವುದು ಕಠಿಣ. ಮೊದಲು ಇಂಗ್ಲಿಷಿನಿಂದ ಬಚಾವಾಗಿ ಕನ್ನಡ ಉಳಿಸಿಕೊಳ್ಳಬೇಕು. ಭಾಷಾವಿದರು ಈ ಕುರಿತು ಅಭ್ಯಸಿಸಿ ಸಾಧ್ಯಾಸಾಧ್ಯತೆಗಳನ್ನು ಪ್ರಕಟಿಸಬೇಕು. ತಮಿಳಿನಲ್ಲಿ ಆದ ಕೆಲಸ ಕಾರ್ಯ ಕನ್ನಡದಲ್ಲಿ ಆಗಲೊಲ್ಲದು ನಮ್ಮ ಮೂಲ ಪ್ರಾಚೀನ ಕೃತಿಗಳು, ತಮಿಳು ಕೃತಿಗಳಂತೆ ಅನ್ಯಭಾಷೆಗಳಿಗೆ ತರ್ಜುಮೆಯಾಗಲಿಲ್ಲ ನಾವು ಈಗಲಾದರೂ ಕನ್ನಡ ಉಳಿಸಿ ಬೆಳೆಸಲು, ಪ್ರಯತ್ನಿಸಬೇಕು. ಸರಕಾರವೂ ಕೈಜೋಡಿಸಬೇಕು. ಕೇವಲ ಮಾತಿನಿಂದ ಮನೆಕಟ್ಟುವುದು ಬೇಡ.

ಕನ್ನಡ ಸೊಲ್ಲರಿಮೆ ಮತ್ತು ಕನ್ನಡಿಗರೂ ದ್ರಾವಿಡರೆ ಕೃತಿಗಳಲ್ಲಿಯ ಕೆಲವು ಶಬ್ದಗಳು:- ಕನ್ನಡ ಸೊಲ್ಲರಿಮೆ- (ವ್ಯಾಕರಣ) ಈಪೊತ್ತು (ವರ್ತಮಾನ ಕಾಲ) ಮುಂಬೊತ್ತು (ಭವಿಷತ್ ಕಾಲ) (ವ್ಯಾಕರಣ) ಹಿಂಬೊತ್ತು (ಭೂತ ಕಾಲ) ಎತ್ತುಗೆ (ಉದಾಹರಣೆ) ಎಸಕಪದ (ಕ್ರಿಯಾ ಪದ) ಕೇಳ್ವ ಬರಿಗೆ (ಪ್ರಶ್ನಾರ್ಥಕ ಚಿನ್ಹೆ) ಕೊಗೆತ- ವರ್ಣನೆ ಗುರ್ತಾ




(ಲಿಂಗಾ) ಸೊಲ್ಲು (ವಾಕ್ಯ) ನಾಡುತಿಟ್ಟ (ನಕಾಶೆ) ಪಸುಗೆ (ಚಾಪ್ಟರ) ಹಲವೆಣಿಕೆ (ಬಹುವಚನ) ಕತ (ಕಾರಣ), ಬಳಕೆಯ ಪದಗಳು-ಕಟ್ಟಲೆ (ಕಟ್ಟಳೆ), ಕಟ್ಟುಪಾಡು, ಕಯ್ವಾಡ, ಹುರುಳು. ಬರವಣಿಗೆ-ಬಾಶೆ, ಬಾರತ, ರಯ್ತರು, ಸಾಕ್ ಶ್ಯಾದಾರ, ನಕ್ಶೆ, ಮಾನವ ಶಾಸ್‌ತ್ರಜ್ನರು, ಸಂಕ್ಶೆ, ಆಕ್ಶೇಪಣೆ, ಪಕ್ಶ, ಕಶ್ಟ, ಹೀಗೆ ಬರೆಯಲು ಕಲಿಯಬೇಕು. ಕೆಲವು ಕನ್ನಡ ಶಬ್ದಗಳು ಬಳಕೆಯಲ್ಲಿವೆ. ಹಳ್ಳಿಗಳಲ್ಲಿ ಸಾಹುಕಾರ, ಗೌಡರಿಗೆ ರೈತರು, 'ಅಡ್ಡಬಿದ್ದೆಬುದ್ದಿ' ಎನ್ನುವ ಪದ, ಹುರುಳು, ಸೂಳ್ ನುಡಿ, ಬೆರಗು, ಕಟ್ಟುಪಾಡು, ಇವಗಾ ಹುರಳೇ ಇಲ್ಲ, ನಿಮ್ಮ ಸೂಳ್ ನುಡಿ ಒಂದರಗಳಿಗೆ, ಮುಂತಾಗಿ ಬಳಕೆಯಾಗುವ ಪದಗಳಿಂದ ಅಂಜಿಕೆಯಿಲ್ಲ. ಈ ಪದಗಳು ಅಚ್ಚ ಕನ್ನಡದವು ಎಂದು ನಮಗೆ ಗೊತ್ತಿಲ್ಲ. ಇಂಥ ಕನ್ನಡದ ಕೆಲಸ ವಿಶ್ವವಿದ್ಯಾಲಯಗಳಿಂದ ಆಗಬೇಕು. ಕನ್ನಡ ವಿಶ್ವವಿದ್ಯಾಲಯ ಇತ್ತ ಗಮನ ಹರಿಸಬೇಕು ಅಂದಾಗ ಡಾ. ಡಿ.ಎನ್. ಶಂಕರಭಟ್ಟರಂಥವರ ಈ ಪ್ರಯತ್ನಕ್ಕೆ ಸಹಾಯ ವಾಗುವುದರೊಂದಿಗೆ ಅದರ ಖಚಿತತೆಗೆ ಮೆರಗು ಕೊಟ್ಟಂತಾಗುವುದು. ಇವರು ನಾಲ್ಕನೇ ಸೊಲ್ಲರಿಮೆ ಪ್ರಕಟಿಸಿದ್ದರೂ ಎತ್ತಲಿಂದಲೂ, ಯಾರಿಂದಲೂ ಸೊಲ್ಲಿಲ್ಲ.